ಓ.ಎಸ್‌ಃ 357/2018

ಡಿ.ಡಬ್ಲ್ಯೂಃ 01

**ದಿನಾಂಕಃ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ವಾದಿ ಪರ ಶ್ರೀ ಬಿ.ವಿ.ಪಿ. ವಕೀಲರಿಂದಃ**

1. ಸರ್ವೆ ನಂ. 44 ಮತ್ತು 46 ಆಸ್ತಿಗಳು O.S.No.27/1977 ಆದ ಡಿಕ್ರಿ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ ಹೆಸರು ನೋಂದಾಯಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.46 ರಲ್ಲಿ 1ನೇ ವಾದಿಯ ಹೆಸರು ಸನ್ 1977 ರಿಂದ ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಇದೆ ಎಂದು ನುಡಿಯುತ್ತಾರೆ. ನಮ್ಮ ಪಾಲಿಗೆ ಬಂದ ಆಸ್ತಿಗಳನ್ನು ನಾವೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಪಾಲಾಗಿರುವುದಿಲ್ಲ, ನಾವು ಮಾರಾಟ ಮಾಡಿದ್ದು ನಿಜವಿರುತ್ತದೆ ಎಂದು ನುಡಿಯುತ್ತಾರೆ. ನಾನು ಮಾರಾಟ ಮಾಡಿದ ಆಸ್ತಿ ನಂ.473 ಇರುತ್ತದೆ, ಅದರ ಕ್ಷೇತ್ರ 36 ಎಕರೆ 15 ಗುಂಟೆ ಇರುತ್ತದೆ. ಪಾಲು ವಿಭಾಗವಾದರು ಸಹ ವಾದಿಗೆ ಪಾಲಿಗೆ ಬಂದ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**